ಶ್ರೀ ಸಿ. ಎಂ. ಪೂಣಚ್ಚ.—ಕೆಲವು ಸಮಯ ಓವರ್ ಲೋಡ್ ಮಾಡುತ್ತಾರೆ. ಅಂಥಾ ನಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೇಸ್ ದಾಖಲು ಮಾಡುತ್ತಾರೆ.

ಶ್ರೀ ಎಸ್. ಆರ್. ರಾಮಯ್ಯ.—ಸ್ಪೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ಹಾಕದೇ ಇರುವುದರಿಂದ, ನದ್ಯಕ್ಕೆ ಇರುವ ಬೇರೆ ಬಸ್ಸುಗಳು ತುಂಬಾ ಓವರ್ ಲೋಡ್ ಆಗಿ ಹೋಗುತ್ತಿರುವುದು ನರಕಾರದ ಗಮನಕ್ಕೆ ಬಂದಿದ್ದರೆ ಅದಕ್ಕೆ ತಕ್ಕ ಕ್ರಮವನ್ನು ತೆಗೆದು ಕೊಂಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಬೇರೆ ಬಸ್ಸು ಇಟ್ಟು ಕೊಂಡವರು ಒಂದೊಂದೇ ಬಸ್ಸನ್ನು ಇಟ್ಟುಕೊಂಡು ಸರ್ವಿಸ್ ನಡೆಸುವಂಥವರಾಗಿರುವದರಿಂದ, ಒಂದು ವೇಳೆ ಏನಾದರೂ ಯಾಂತ್ರಿಕ ತೊಂದರೆಯಾಗಿ ಬಸ್ಸು ಕೆಟ್ಟು ಹೋಗಿ ಅದರ ಮೂಲಕ ಪ್ರಯಾಣಿಕರಿಗೆ ಅನನುಕೂಲ ಉಂಟಾಗಿರಬಹುದು.

ಶ್ರೀ ಎಸ್. ಆರ್. ರಾಮಯ್ಯ.—ಕಾನೂನಿನ ನಿಯಮದ ಪ್ರಕಾರ spare ಬಸ್ಸು ಇಟ್ಟು ಕೊಂಡಿರ ಬೇಕು ಎಂದು ನಿಯಮವಿಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ಕಾನೂನು ನಿಯಮ ಹಾಗೆ ಇದೆ. ಆದರೆ ಅಂತವರು ಒಂದೊಂದೇ ಬಸ್ಸು ಇಟ್ಟು ಕೊಂಡು ಸರ್ವಿಸ್ ನಡೆಸುತ್ತಿದ್ದಾರೆ. Spare ಬಸ್ ಇಡುವದಕ್ಕೆ ಅವರ ಹತ್ತಿರ ಣವಿರುವದಿಲ್ಲ. ಒಂದೊಂದೇ ಬಸ್ಸು ಇಟ್ಟುಕೊಂಡಂವರು ಕೆಲವು ಜನರು ಒಟ್ಟಿಗೆ ಸೇರಿ amalgamate ಮಾಡಿ ಒಂದೇ workshop ಮಾಡಿಕೊಂಡು ಸರ್ವಿಸ್ ನಡೆಸುತ್ತಿದ್ದಾರೆ. ಈ ರೀತಿ amalgamate ಮಾಡಿ ಸರ್ವಿಸ್ ನಡೆಸುವಂತೆ ಒಂದು scheme ಸಹ ಇದೆ. ಆದರೆ ಅದನ್ನು ಅಷ್ಟು ಬಲವತ್ತರವಾಗಿ ಕಾರ್ಯರೂಪದಲ್ಲಿ ತರಲು ಸ್ವಲ್ಪ ತೊಂದರೆಯುಂಟಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಲವು ಪೋಲೀಸ ಸ್ಟೇಷನ್ನುಗಳಲ್ಲಿ ರಿಜಿಸ್ಟರ್‌ನಲ್ಲಿ ಡ್ರೈವರ್ ರುಜು ಹಾಕುತ್ತಾರೆ ಎಂದು ಮಂತ್ರಿಗಳು ಈಗತಾನೆ ಉತ್ತರ ಕೊಡಿಸಿದರು. ಆದರೆ ಎಷ್ಟೋಸಾರಿ ಡ್ರೈವರ್ ಬದಲು ಕಂಡಕ್ಟರ್ ರುಜು ಹಾಕುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಕಂಡಕ್ಟರ್ ಅಥವಾ ಡ್ರೈವರ್ ಯಾರಾದರೊಬ್ಬರು ರುಜು ಹಾಕಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೂಲ್ ಪ್ರಕಾರ ಡ್ರೈವರ್ ರುಜು ಹಾಕಬೇಕು ಎಂದು ಇರುವಾಗ ಕಂಡಕ್ಟರ್ ರುಜು ಹಾಕಿದರೆ ಅದು rules violate ಮಾಡಿದಹಾಗೆ ಆಗುವುದಿಲ್ಲವೇ ?

Sri C. M. POONACHA.—One of the staff, either the driver or the conductor, may sign.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬಸ್ಸು ಕೆಟ್ಟು ಹೋಗಿ ಸರ್ವಿಸ್ ನಿಲ್ಲಿಸಿದ್ದನ್ನು ಬಸ್ ಮಾಲೀಕರು ನರಕಾರಕ್ಕೆ ತಿಳಿಸಬೇಕು ಎಂದು ಒಂದು ಸೂಚನೆ ಇಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಟ್ರಾನ್ಸ್‌ಪೋರ್ಟ್ ಇಲಾಖೆ ಇದರ ನಲುವಾಗಿ ಇದೆ. ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಇದ್ದಾರೆ. ಬಹಳ ದೀರ್ಘ ಕಾಲದವರೆಗೆ ಸರ್ವಿಸ್ ನಡೆಯುನದೆ ಹೋದರೆ ಆಗ್ಗೆ ಟ್ರಾನ್ಸ್‌ಪೋರ್ಟ್ ಇಲಾಖೆಯ ತಿಳುವಳಿಕೆಗೆ ಬರುತ್ತದೆ. ಕೂಡಲೇ ನೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪೋಲೀಸರಿಗೆ ಗೊತ್ತಾಗುತ್ತದೆ ಅಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಗೊತ್ತಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಪ್ರಯಾಣಿಕರು ಜಾಸ್ತಿ ಇರುವುದರಿಂದ ಓವರ್ ಲೋಡ್ ಮಾಡಿ ಪ್ರಯಾಣಿಕರನ್ನ ಬಸ್ ಟಾಪ್ ಮೇಲೆ ಸಹ ಕೂಡಿಸಿಕೊಂಡು ಹೋಗುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಅದನ್ನು ನಾನು ಹೇಳಲಾರೆ. ಕೆಲವೊಂದು ಕಡೆ ಆ ರೀತಿ ಸಂಭವಿಸಿರಬಹುದು.

ಶ್ರೀ ಟಿ. ಹನುಮಯ್ಯ.—ಆ ರೀತಿಯಾಗಬಾರದು ಎಂಬುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಸಿ. ಎಂ. ಪೂಣಚ್ಚ.—ಅವರ ಮೇರೆ over load ಮಾಡಿದ್ದಕ್ಕೆ ಕೂಡಲೇ ಖಟ್ಲೆ ಹಾಕಲಾಗುವುದು.

ಶ್ರೀ ಎಸ್. ಆರ್. ರಾಮಯ್ಯ.—ಬಸ್ಸು ಸರ್ವಿಸ್ ನಸ್ಪೆಂಡ್ ಮಾಡಿದ ಕಾಲದಲ್ಲಿ ಬೇರೆ ಬಸ್ಸು ಓಡಿಸುವ ದಕ್ಕೆ ಏನಾದರೂ ವ್ಯವಸ್ಥೆ ಇಟ್ಟು ಕೊಂಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಆಯಾಯ ಅವಧಿಯನ್ನು ಅನುಸರಿಸಿ ಮಾಡಲಾಗುವುದು. ಒಂದು ತಿಂಗಳಿನವರೆಗೆ ಮಾತ್ರ ಇದ್ದರೆ, ಒಂದು ತಿಂಗಳ ಗೋಸ್ಕರ ಬೇರೆ ಯಾರೂ ಬರುವದಿಲ್ಲ. ಒಂದು ವೇಳೆ ಸರ್ವಿಸ್ cancel ಮಾಡಿದ್ದರೆ ಆ ಮಾರ್ಗದಲ್ಲಿ ಬೇರೆ ಬಸ್ಸು ಓಡಿಸಲಾಗುವುದು. ಚಿಕ್ಕ ಅವಧಿಯವರೆಗೆ ಸಸ್ಪೆಂಡ್ ಮಾಡಿದ್ದರೆ ಇನ್ನೊಬ್ಬರು ಬಸ್ ಓಡಿಸುವ ವ್ಯವಸ್ಥೆ ಮಾಡಲಾಗುವದಿಲ್ಲ.

Location of Intermediate College in Shimoga.

Q.—972. Sri A. R. BADRI NARAYAN (Thirthahalli).—

Will the Government be pleased to state :—

(*a*) the date on which the new Intermediate College building in Shimoga was constructed ;

(*b*) whether any protests were made that the location of the building in its present place would cause great inconvenience to the students ;

(*c*) whether an assurance was given that a foot bridge to the Tunga river would be constructed to avoid inconvenience to the students ;

(*d*) if so, the action they have taken in the matter ?

A.—Sri V. VENKATAPPA (Minister for Education).—

(*a*) During 1940-42.

(*b*) Yes.

(*c*) Government are not aware of any definite assurance having been given.

(SRI V. VENKATAPPA)

(*d*) On account of technical and engineering difficulties the proposal to construct a foot-bridge had to be dropped.

ಶ್ರೀ ಎ. ಆರ್. ಬದರೀನಾರಾಯಣ.—ಕಾಲೇಜಿಗೆ ಹೋಗಲು ಫುಟ್ ಬ್ರಿಡ್ಜ್ ಮಾಡದೇ ಇರುವದರ ಮೂಲಕ, ಜನರು protest ಏನಾದರೂ ಮಾಡಿದ್ದಾರೆಯೆ ?

ಶ್ರೀ ವಿ. ವೆಂಕಟಪ್ಪ.—ಅನನುಕೂಲವಾಗಿದೆ. ಅದನ್ನು ನಿವಾರಿಸಬೇಕೆಂದು ತಿಳಿಸಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ.—ಏತಕ್ಕೋಸ್ಕರ protest ಮಾಡಿದ್ದಾರೆ ?

ಶ್ರೀ ವಿ. ವೆಂಕಟಪ್ಪ.—ಅಲ್ಲಿಗೆ ಹೋಗಲು ದೂರವಾಗುತ್ತದೆ, ಕಷ್ಟವಾಗುತ್ತದೆಂದು ಹೇಳಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ.—ಹಾಗಾದರೆ ಹತ್ತಿರ ಇರುವಂತೆ ಆಗಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವಿ. ವೆಂಕಟಪ್ಪ.—ಕೆಲಸ ನಡೆದಿದೆ.

ಶ್ರೀ ಎ. ಆರ್. ಬದರೀನಾರಾಯಣ.—ಫುಟ್ ಬ್ರಿಡ್ಜ್ ಆಗದೇ ಹೋದರೆ ಬೇರೆ ರೀತಿ ಏನು ಮಾಡಬೇಕು ಎಂದು ಯೋಚನೆ ಇದೆ ?

Sri H. K. VEERANNA GOWDH.—May I explain the position, Sir ? As Shri Badri Narayan knows that the engineering authorities said that a foot-bridge was not desirable. Therefore it was dropped. If a foot-bridge was constructed, the municipality had consented to give 1/4 of the cost. The estimate for the foot-bridge was about 2 lakhs and the share of the municipality would come to about Rs. 25,000. Since the agitation is there for shortening the distance between the college and the town, a pucca bridge near about Ramanna's Park is proposed and the estimated cost is 10 to 12 lakhs. If the municipality is prepared to contribute 1/4th of its quota, their share of the expenditure, Government will certainly consider the question of taking up the pucca bridge.

Sri A. R. BADRI NARAYAN.—What is the view of the Municipality in this matter, Sir ?

Sri H. K. VEERANNA GOWDH.—I do not know. I believe we have addressed the Municipality and we are awaiting their decision or we are communicating the view of the Government shortly.

ಶ್ರೀ ಬಿ. ರಾಚಯ್ಯ.—ಇಂಟರ್‌ಮೀಡಿಯೆಟ್ ಕಾಲೇಜಿಗೆ ಹೋಗುವುದಕ್ಕೆ ಈ ಫುಟ್ ಬ್ರಿಡ್ಜ್ ನಿಲ್ಲಿಸಲು ಏನು ಕಷ್ಟ ಬಂದಿದೆ, ಸ್ವಾಮಿ ?

Sri H. K. VEERANNA GOWDH.—It *is not so.* The position is a *little* different. If you want to shorten the distances between the college and the town, a bridge seems to be necessary very near Ramanna's Park. It is not very difficult also. Because now as the sugar factory there has commenced operation, there will be heavy traffic of carts going to the factory. So it is very necessary to have another bridge to avoid conjestion on the present bridge.

ಶ್ರೀ ಕುಂದೂರ್ ರುದ್ರಪ್ಪ.—ಶಿವಮೊಗ್ಗಾದಲ್ಲಿ ದುರ್ಗಿಗುಡಿ ಎಕ್ಸ್‌ಟೆನ್‌ಷನ್ನಿನಿಂದ ಕಾಲೇಜು ಎಷ್ಟು ಮೈಲಿ ದೂರ ಆಗುತ್ತದೆ ಸ್ವಾಮಿ ?

ಶ್ರೀ ವಿ. ವೆಂಕಟಪ್ಪ.—ನನಗೆ ಗೊತ್ತಿಲ್ಲ.

ಶ್ರೀ ಕುಂದೂರ್ ರುದ್ರಪ್ಪ.—ನಾಲ್ಕು ಮೈಲಿ, ಎಂಟು ಮೈಲಿ ನಡೆದುಕೊಂಡು ಕಾಲೇಜಿಗೆ ಹೋಗುವ ದಾದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಬಂದಿದೆ.

ಶ್ರೀ ಕುಂದೂರ್ ರುದ್ರಪ್ಪ.—ಪ್ರತಿಯೊಬ್ಬ ಮಂತ್ರಿಯು ಅಲ್ಲಿಗೆ ಹೋದಾಗ್ಗೆ ಬಹಳ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ಒತ್ತಿ ಒತ್ತಿ ಅವರಿಗೆ ಹೇಳಿದ್ದು ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ವೆಂಕಟಪ್ಪ.—ಬಂದಿದೆ.

ಶ್ರೀ ಕುಂದೂರ್ ರುದ್ರಪ್ಪ.—ದುಡ್ಡು ಇಲ್ಲ ಎಂದು ದಾಗಿಯೋ ಅಥವಾ ಏತಕ್ಕೋಸ್ಕರ ಆ ಫುಟ್ ಬ್ರಿಡ್ಜ್ ಇನ್ನೂ ಮಾಡಿಲ್ಲ ?

ಅಧ್ಯಕ್ಷರು.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಊರಿಗೂ ಮತ್ತು ಕಾಲೇಜಿಗೂ ಅಂತರ ಕಡಿಮೆ ಮಾಡುವುದಕ್ಕೆ ಇನ್ನೊಂದು ದೊಡ್ಡ ಸೇತುವೆಯನ್ನು ಕಟ್ಟಿಸಬೇಕೆಂದು ಇದೆ. ಕಾಲುಧಾರಿ ಸೇತುವೆ ಕಟ್ಟಿಸಿದರೆ ಅದು ನದಿಯ ಪ್ರವಾಹದಿಂದ ಕೊಚ್ಚಿ ಹೋಗುತ್ತಿದೆಂದು ಇಂಜಿನಿಯರು ಅಭಿಪ್ರಾಯ ಪಟ್ಟಿದ್ದಾರೆ. ಆ ರೀತಿ ಶಿವಮೊಗ್ಗದಲ್ಲಿ ಸಣ್ಣ ಸೇತುವೆ ಕೊಚ್ಚಿ ಹೋದ ಅನುಭವ ನಮಗೆ ಬಂದಿದೆ. ಸರಿಯಾದ ಒಂದು ದೊಡ್ಡ ಸೇತುವೆಯನ್ನು ಕಟ್ಟುವುದಕ್ಕೆ ಹತ್ತು 12 ಲಕ್ಷ ರೂಪಾಯಿ ಖರ್ಚು ಆಗುವದೆಂದು ಅಂದಾಜು ಮಾಡಲಾಗಿದೆ. ಈ ಅಂದಾಜು 1/4 ಭಾಗ ಅಂದರೆ ಸುಮಾರು ಮೂರು ಲಕ್ಷ ರೂಪಾಯಿ ಮುನಿಸಿಪಾಲಿಟಿಯವರು ಕೊಡಲು ಒಪ್ಪಿದರೆ ಮಾತ್ರ ಈ ಸೇತುವೆ ಕಟ್ಟಿಸುವುದನ್ನು ಸರಕಾರ ಯೋಚನೆ ಮಾಡಲು ಸಿದ್ಧವಾಗಿದ್ದಾರೆ.

ಶ್ರೀ ಕುಂದೂರ್ ರುದ್ರಪ್ಪ.—ದೇಶದ ಹಿತದೃಷ್ಟಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂಬ ಕಾರಣದ ಮೂಲಕ ಈ ಕೆಲಸವನ್ನು ಸರ್ಕಾರದವರೇ ಪಹಿಸಿಕೊಂಡರೆ ಒಳ್ಳೆದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದನ್ನು ಸರಕಾರ ವಹಿಸಿಕೊಳ್ಳಲು ಆಗುವುದಿಲ್ಲ. ಇದು ಪೌರ ಸಭೆಗೂ ಸಂಬಂಧಪಟ್ಟದ್ದಾಗಿದೆ. ಈಗ ಹೊದ ತೊಂದರೆ ಅಷ್ಟೇನೂ ಆಗುವುದಿಲ್ಲ. ಅಲ್ಲ ಈಗ ಸಕ್ಕರೆ ಕಂಪನಿ ಕೆಲಸ ಪ್ರಾರಂಭಿಸಿದೆ. ಅಲ್ಲಿಗೆ ತರುವ ಕಬ್ಬಿನ ಮೇಲೆ

ಸೆಸ್ ಹಾಕುತ್ತಾರೆ. ಸೆಸ್ ಮೊಬಲಗಿನ ಸ್ವಲ್ಪ ಭಾಗ ಹಣವನ್ನು ಸಂಚಾರ ಸೌಕರ್ಯಕ್ಕೆ ಉಪಯೋಗಿಸಬೇಕು ಎಂದು ಕಾನೂನು ಇದೆ. ಆದಕಾರಣ ಸ್ವಲ್ಪ ಹಣ ಪೌರ ಸಭೆಯಿಂದಲೂ, ಸ್ವಲ್ಪ ಹಣ ಕಬ್ಬಿನ ಮೇಲಿನ ಸುಂಕದಿಂದಲೂ, ಸ್ವಲ್ಪ ಭಾಗ ಸರ್ಕಾರದಿಂದಲೂ ಕೂಡಿಸಿಕೊಂಡು ಈ ಸೇತುವೆಯನ್ನು ಕಟ್ಟಿಸಬೇಕು ಎಂದು ಸರಕಾರದ ಈಗಿನ ಅಭಿಪ್ರಾಯವಾಗಿದೆ.

---

9 A.M.

M.L.A.'s on the Policy Committee.

Q.—1281. Sri S. SUBBAYA NAIK (Puttur).—

Will the Government be pleased to state:—

(*a*) the number and names of M.L.A.'s belonging to Hill Tribes;

(*b*) the names of members who are in the Policy Committee;

(*c*) the name of the President of that Committee?

A.—Sri R. CHENNIGARAMAIAH (Minister for Local Self-Government).—

(*a*) Nil.

(*b*) List of M.L.A.'s who are in the Policy Committee is appended.

(*c*) There is no President but the Minister for Local Self-Government is the Chairman.

LIST

1. Minister for Local Self-Government (Chairman).
2. Smt. Bhogale Champabai Piraji, M.L.A., Surapet P. O.
3. Sri J. L. Kabadi, M.L.A., Nehru Road, Bijapur.
4. Sri B. Sham Sunder, M.L.A., Quazipura, Gulbarga.
5. Sri Ramachandra Veerappa, M.L.A., Post Humnabad, Bidar District.
6. Sri Bhimanna, M. L. A., c/o. Papuji Pathashala, Mangalwarpet, Raichur.
7. Sri Manjappa Ullal, M.L.A., Babu Gudde, Mangalore-1.
8. Sri M. Danappa, M.L.A., Secretary, Harijan Boys' Hostel, Millerpet, Bellary.
9. Sri T. Hanumaiah, M.L.A., Church Extension, Chitaldrug.
10. Sri L. H. Thimma Bovi, M L.A., Landlord, Lakkavalli, Chickmagalur District.
11. Sri A. Muniyappa, M.L.A, Fort, Harijan Colony, Chickballapur, Kolar District.
12. Sri B. Rachiah, B.SC., B.L., M.L.A., Alur, Chamarajanagar Taluk, Mysore District.
13. Sri Mallikarjunaswamy, M.A., B.L., Dip-in-Ind., M.L.A., c/o Sri M. Shankaraiah, Prop., Sri Chowdeswari Rice and Flour Mills, Malavalli P. O., Mandya District.
14. Sri B. Basavalingappa, B.A., LL.B., M.L.A., Advocate, No. 65, Nehru Nagar, Bangalore.
15. Sri A. S. Dudhya Naik, M.L.A., Agriculturist, Ayanur, Shimoga District.
16. Sri H. K. Siddiah, M.L.A., A.K. Colony, Hassan.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈ ಸಮಿತಿ ಯಾವಾಗ ರಚನೆಯಾಯಿತು?

ಶ್ರೀ ಆರ್. ಚೆನ್ನಿಗರಾಮಯ್ಯ.—ಸುಮಾರು ಒಂದು ವರ್ಷವಾಯಿತು.

ಶ್ರೀ ಎಸ್. ಸುಬ್ಬಯ್ಯ ನಾಯಕ್.— "ಅನುಸೂಚಿತ ಜಾತಿಗಳ ಪರವಾದ ಚುನಾವಣೆಸ್ಥಾನ" ಎಂದು ಹಾಕುವುದರಿಂದ ಕೆಲವು ಹಕ್ಕು ಬಾಧ್ಯತೆಗಳಿಗೆ ತೊಂದರೆಯಾಗಿದೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಎಂದು ಬೇರೆ ಬೇರೆಯಾಗಿ ನಮೂದಿಸುತ್ತಿಲ್ಲ.

ಅಧ್ಯಕ್ಷರು.—ತಾವು ಷೆಡ್ಯೂಲ್ಡ್ ಕ್ಯಾಸ್ಟ್ಸಿಗೆ ಸೇರಿದವರೆ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ನಾನು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದವನು. (*b*) ಪ್ರಶ್ನೆಗೆ ಕೊಟ್ಟಿರುವ ಉತ್ತರವಾಗಿ ವಿಧಾನ ಸಭಾ ಸದಸ್ಯರ ಹೆಸರನ್ನು ಮಾತ್ರ ಕೊಟ್ಟಿದೆ. ಬೇರೆಯವರನ್ನು ಈ ಸಮಿತಿಗೆ ತೆಗೆದುಕೊಳ್ಳಬಾರದೆಂದು ನಿಯಮವಿದೆಯೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಂ. ಎಲ್. ಎ. ಗಳಲ್ಲದೆ ಬೇರೆಯವರೂ ನಾಲ್ಕು ಜನರಿದ್ದಾರೆ.

Sri J. P. SARWESH.—What is the object of the Government in formiag the Scheduled Castes Policy Committee?

Sri R. CHENNIGARAMAIAH.—To advise the Government in the matter of Scheduled Castes amelioration work.

Sri J. B. SARWESH.—Why is the Minister made the Chairman of the Policy Committees? Does it not serve the very purpose for which the Committee was formed?